



**ಎಡದಿಂದ ಬಲಕ್ಕೆ**

1. ಆ ಗ್ರಾಮದಲ್ಲಿರುವ ಸಂಬಂಧಿಗಳ ನಡುವೆಯೇ ಅದೇನೋ ಯುದ್ಧ 3
3. ಕೂಲಂಕಷವಾಗಿ ಪರೀಕ್ಷಿಸಿ ಖರೀದಿಸಿದ್ದು ಈ ಪೂಜಾ ಬಿಂದಿಗೆ 3
4. ನೌಕರರ ಯಾವ ಬೇಡಿಕೆಯನ್ನೂ ಒಪ್ಪುವುದಿಲ್ಲವೆಂದ 3
6. ವ್ಯಾಯಾಮವನ್ನು ಕಲಿಸಲು ಬಂದಿರುವವನದು ಇನ್ನೂ ತಾರುಣ್ಯ 3
7. ಕುಳ್ಳಿರಿಸು ಎಂದದ್ದನ್ನು ಕೋಪ ಬರಿಸು ಎಂದು ಅರ್ಥ ಮಾಡಿಕೊಂಡ! 4
9. ಈ ಅಬಲೆಯರನ್ನೆಲ್ಲ ರಕ್ಷಿಸಲು ಗಜಕ್ಕಿರುವಂಥ ಶಕ್ತಿ ಬೇಕು 4
11. ಅಷ್ಟೂ ಜನ ನಟಿಸುವವರ ನಡುವೆ ಒಬ್ಬ ಮಾತ್ರ ಪರಮ ಶ್ರೇಷ್ಠ 4
13. ಭಜನಾ ಕಾರ್ಯಕ್ರಮಕ್ಕೆ ಬೇಕಾದಷ್ಟಿದೆ ಮನುಜರ ಬೆಂಬಲ 4
15. ಚೆನ್ನಾಗಿ ಹಾಡಲಿಕ್ಕೆ ಬರುವವರನ್ನು ಪತ್ತೆ ಮಾಡು 3
17. ತುಳಿತಕ್ಕೆ ಸಿಲುಕಿ ಉಳಿದು ಬಂದವರ ಸ್ವಾಗತಕ್ಕೆ ಇಷ್ಟೂ ಚಿಗುರೆಲೆ 3
18. ಕಾಡಿಸಲು ಬಂದವನ ಜೊತೆಗೆ ಕೋಪದ ಮಾತುಗಳನ್ನಾಡು 3
19. ಪಿತಾಮಹನ ಕೈಂಕರ್ಯ ಮಾಡಿ ಪುಣ್ಯವಂತನಾದ 3

**ಮೇಲಿನಿಂದ ಕೆಳಕ್ಕೆ**

1. ಹೊಸ ಹಾಸಿಗೆಯನ್ನು ಕೊಳ್ಳಲು ಕೊಂಚ ನೆರವು 3
2. ಮೇದಿನಿಯನ್ನ ಕಾಪಾಡುವ ಕ್ರಮಗಳದೇ ಮತ್ತೆ ಮತ್ತೆ ಚಿಂತನ 3
3. ಹೇಳಿ ಕಳುಹಿಸಿದ ಕೂಡಲೇ ಕೊಂಡು ತಂದದ್ದು ಬಾಳೆಹಣ್ಣು 3
5. ವಿವರಗಳನ್ನೆಲ್ಲ ಸಂಗ್ರಹಿಸಿ ಬೇರೆಡೆಗೆ ಸಾಗಿಸಿದರೇ? 3
7. ತಮ್ಮನಿಗೇ ಕಾಟ ಕೊಡುವುದೆಂದರೆ ಒಳ್ಳೆಯ ಸ್ವಭಾವವಲ್ಲವೆಂದೇ ಅರ್ಥ 4
8. ಎಂಥ ಸುಂದರಾಕಾರ, ಈ ಅಮೃತ ಮೂಲ ಚಂದ್ರ 4
9. ಅಶ್ವ ಮೇಧ ಯಜ್ಞ ನಡೆದದ್ದು ಭಾದ್ರಪದದ ನಂತರದ ಮಾಸದಲ್ಲಿ 4
10. ಲಾಗ ಹಾಕುವುದನ್ನು ಕಲಿಯಲೂ ಶುಭ ಮುಹೂರ್ತ ನೋಡಬೇಕೇ? 4
12. ಉರಿಯುತ್ತಿರುವ ಬೆಂಕಿಯನ್ನು ಕೂಡಲೇ ಆರಿಸಬೇಕೆಂದು ಒತ್ತಾಯ 3
14. ಕೂಸನ್ನು ಮಲಗಿಸುವ ವೇಳೆಗೆ ಬೆಳಕು ಹರಿದಿತ್ತು 3
15. ಹರಪನ ಹಳ್ಳಿಯ ಜನರಲ್ಲಿ ಅದೇನೋ ಹೊಸ ಉತ್ಸಾಹ 3
16. ತೊಡಗಿಸಿದ್ದ ಹಣದ ಮೌಲ್ಯದಲ್ಲಿ ಇದ್ದಕ್ಕಿದ್ದಂತೆ ಭಾರೀ ಇಳಿತ 3

## 07–08–2025 ಉತ್ತರಗಳು

**ಎಡದಿಂದ ಬಲಕ್ಕೆ**

1. ಸಂಭಾವಿತ 3. ಕರಾಗ್ರ 4. ವಿನೀತ 6. ಹರಿಗೋಲು 7. ಅರ್ಧಗೋಳ 8. ಸೆಕೆಗಾಲ 10. ತಿರುಬೋಕಿ 12. ಪಂಚವಟಿ 14. ನೂಕುಬಲ 16. ನೆನಪು 17. ಹಮ್ಮೀರ 18. ರಹದಾರಿ

**ಮೇಲಿನಿಂದ ಕೆಳಕ್ಕೆ**


1. ಸಂಗ್ರಹ 2. ತವಿಲು 3. ಕಡೆಗೋಲು 5. ತಡಿಕೆ 7. ಅಧಿಪತಿ 9. ಲಟಾಪಟಿ 11. ಬೋಧನೆ 13. ಸಂಚಕಾರ 14. ನೂಪುರ 15. ಲಹರಿ

ಪ್ರಶ್ನಾಂಕಣ

# ಬಂಗಾರ: ಇರುವುದೆಷ್ಟು? ತೆಗೆದಿರುವುದೆಷ್ಟು?

ಭೂಮಿಯಲ್ಲಿ ಬಂಗಾರ ಎಲ್ಲೆಲ್ಲೂ ಇದೆ. ಬಂಗಾರ ಭೂ ನೆಲದಲ್ಲಿದೆ; ಕಡಲಿನ ನೀರಿನಲ್ಲಿದೆ; ಕೆಲವು ನದಿಗಳಲ್ಲಿದೆ; ಭೂ ಗರ್ಭದಲ್ಲೂ ಇದೆ. ದಿ ವರ್ಲ್ಡ್ ಗೋಲ್ಡ್ ಕೌನ್ಸಿಲ್ ಪ್ರಕಟಿಸಿರುವಂತೆ ಈ ವರ್ಷ (2025) ಜೂನ್ ತಿಂಗಳಿನ ಅಂತ್ಯದವರೆಗೆ ಮನುಷ್ಯರು ಭೂಮಿಯಿಂದ ಹೊರತೆಗೆದಿರುವ ಬಂಗಾರದ ಒಟ್ಟು ಪ್ರಮಾಣ 2,16,265 ಟನ್! (1 ಟನ್ = 1000 ಕಿಲೋ ಗ್ರಾಂ). ಇಷ್ಟೂ ಬಂಗಾರವನ್ನು ಒಟ್ಟಾಗಿ ಒಂದು ಚೌಕ ಘನದ (ಕ್ಯೂಬ್) ಆಕಾರಕ್ಕೆ ಎರಕ ಹೊಯ್ದರೆ ಆ ಘನದ ಪ್ರತಿ ಅಂಚು 22 ಮೀಟರ್ (=72 ಅಡಿ) ಉದ್ದ ಇರುತ್ತದೆ. ಈವರೆಗೆ ಹೊರತೆಗೆದಿರುವ ಇಷ್ಟೂ ಬಂಗಾರದ ಶೇಕಡ 45 ಭಾಗ ಆಭರಣಗಳಲ್ಲಿದೆ; ಶೇಕಡ 22 ಭಾಗ ಗಟ್ಟಿಗಳು ಮತ್ತು ನಾಣ್ಯಗಳ ರೂಪದಲ್ಲಿ ಬಂಡವಾಳ ಹೂಡಿಕೆಯಲ್ಲಿದೆ. ಉಳಿದ ಶೇಕಡ 17 ಭಾಗ ವಿವಿಧ ರಾಷ್ಟ್ರಗಳ ಕೇಂದ್ರೀಯ ಬ್ಯಾಂಕುಗಳಲ್ಲಿ ಇಟ್ಟಿಗೆಗಳ ರೂಪದಲ್ಲಿ ರಾಷ್ಟ್ರೀಯ ಸಂಪತ್ತಿಗೆ ಆಧಾರವಾಗಿ ಇಡಲ್ಪಟ್ಟಿದೆ (ಹೀಗೆ ಜೂನ್ 2025ರಲ್ಲಿ ಇದ್ದಂತೆ ನಮ್ಮ ದೇಶದ ರಿಸರ್ವ್ ಬ್ಯಾಂಕ್ ನಲ್ಲಿರುವ ಬಂಗಾರ 880 ಟನ್) ಸ್ಪಷ್ಟವಾಗಿಯೇ ಭೂಮಿಯಿಂದ ಹೊರತೆಗೆದಿರುವ ಬಂಗಾರ ಭೂಮಿಯಲ್ಲಿರುವ ಒಟ್ಟು ಬಂಗಾರದ ಒಂದು ಅತ್ಯಲ್ಪ ಭಾಗ ಮಾತ್ರ!

ಭೂ ನೆಲದಲ್ಲಿ ಗಣಿ ತೋಡಿ ತೆಗೆಯಬಹುದಾದ ಇನ್ನೂ 64,000 ಟನ್ ಬಂಗಾರ ಹರಡಿದೆ. ಅಂತಹ ಬಹು ದೊಡ್ಡ ನಿಕ್ಷೇಪಗಳು ರಷ್ಯಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ದೇಶಗಳಲ್ಲಿವೆ (ಗಣಿಗಳಲ್ಲಿ ದೊರಕಿದ ಎರಡು ಬಂಗಾರ ಗಟ್ಟಿಗಳು ಚಿತ್ರ 1 ಮತ್ತು 2ರಲ್ಲಿವೆ). ಭೂಮಿಯಲ್ಲಿರುವ ಬಂಗಾರದ ನಿಕ್ಷೇಪಗಳನ್ನು ಎರಡು ವಿಧಗಳಲ್ಲಿ ವರ್ಗೀಕರಿಸಲಾಗಿದೆ: ರಿಸರ್ವ್ಸ್ (ಮೀಸಲು ನಿಧಿಗಳು) ಮತ್ತು ರಿಸೋರ್ಸಸ್ (ಸಂಪನ್ಮೂಲಗಳು). ನೆಲದಿಂದ ಹೊರತೆಗೆದು ಲಾಭದಾಯಕವಾಗಿ ಪ್ರತ್ಯೇಕಿಸಿ ಪಡೆಯಬಹುದಾದ ನಿಕ್ಷೇಪಗಳೆಲ್ಲ ಮೊದಲ ಗುಂಪಿಗೆ ಸೇರುತ್ತವೆ. ನಿಕ್ಷೇಪಗಳಿರುವ ನೆಲೆಗಳು ತಿಳಿದಿದ್ದರೂ ಲಾಭದಾಯಕವಾಗಿ ಅವನ್ನು ಹೊರತೆಗೆಯುವುದು ಸಾಧ್ಯವೇ ಇಲ್ಲದ ನಿಧಿಗಳು ಎರಡನೇ ಗುಂಪಿಗೆ ಸೇರುತ್ತವೆ (ಚಿಕ್ಕ ಪ್ರಮಾಣದ ಅದಿರಿನಿಂದ ಬಂಗಾರವನ್ನು ಪ್ರತ್ಯೇಕಿಸಲು ಪಾದರಸವನ್ನೂ (ಚಿತ್ರ 3) ಭಾರೀ ಪ್ರಮಾಣದ ಅದಿರಿನಿಂದ ಬಂಗಾರವನ್ನು ಪ್ರತ್ಯೇಕಿಸಲು ಆರ್ಸೆನಿಕ್ ಸಂಯುಕ್ತವನ್ನೂ ಬಳಸಲಾಗುತ್ತದೆ).




ದಿ ವರ್ಲ್ಡ್ ಗೋಲ್ಡ್ ಕೌನ್ಸಿಲ್‌ನ ಪ್ರಕಾರ ಧರೆಯಲ್ಲಿರುವ ಬಂಗಾರದ ರಿಸರ್ವ್‌ಗಳ ಮೊತ್ತ 54,770 ಟನ್ ಇದೆ. ಹಾಗೆಯೇ ರಿಸೋರ್ಸ್‌ಗಳ ರೂಪದಲ್ಲಿ 1,32,110 ಟನ್ ಬಂಗಾರ ಇದೆ! ವಾಸ್ತವ ಏನೆಂದರೆ, ಇವೆಲ್ಲದರ ಹೊರತಾಗಿ ಭೂ ಗರ್ಭದಲ್ಲಿ ಅತ್ಯಂತ ಹೆಚ್ಚು ಪ್ರಮಾಣದ ಬಂಗಾರ ಸೇರಿಹೋಗಿದೆ. ಅದರ ನಿಖರ ಪ್ರಮಾಣವನ್ನು ಇನ್ನೂ ನಿರ್ಧರಿಸುವುದೇ ಸಾಧ್ಯವಾಗಿಲ್ಲ. ಭೂ ಮೇಲ್ಮೈನಿಂದ 2900 ಕಿಲೋಮೀಟರ್ ಆಳದಲ್ಲಿ, 6000 ಡಿಗ್ರಿ ಸೆಲ್ಷಿಯಸ್ ಉಷ್ಣತೆಯಲ್ಲಿ ಕುದಿಯುತ್ತಿರುವ ಭೂ ಗರ್ಭದ ಸನಿಹಕ್ಕೆ ಹೋಗುವುದೂ ಸಾಧ್ಯವಿಲ್ಲ (ನೆಲದಲ್ಲಿ ಈವರೆಗೆ ಕೊರೆಯಲಾಗಿರುವ ಅತ್ಯಂತ ಹೆಚ್ಚು ಆಳದ ರಂಧ್ರದ ಆಳ 12 ಕಿಲೋ ಮೀಟರ್ ಅಷ್ಟೇ); ಅಲ್ಲಿರುವ ಬಂಗಾರವನ್ನು ಹೊರತೆಗೆಯುವುದು ಕನಸಿನಲ್ಲೂ ಸಾಧ್ಯವಿಲ್ಲ!

■ ಎನ್. ವಾಸುದೇವ್